**ಅಸಲು ದಾವ ಸಂಖ್ಯೆಃ 875/2022**

**ಪಿ.ಡಬ್ಲೂ -1**

**ದಿಃ 11-02-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀಮತಿ. JSB ರವರಿಂದಃ-**

1. ಸರ್ವೆ ನಂಬರ 56/7 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ವಾಟ್ನಿ ಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ವಾಟ್ನಿ ಪತ್ರ ನಿಪಿ-4 ರಂತೆ ಇರುತ್ತದೆ. ಈಗ ನಾನು ನಿಪಿ-4 ದಾಖಲೆ ನೋಡುತ್ತಿದ್ದು, ಅದರಲ್ಲಿ ಸಾಕ್ಷಿದಾರರಾಗಿ ರಾಜು ಈರಪ್ಪ ಹಟ್ಟಿ ಹಾಗು ಪರಶುರಾಮ ಯಲ್ಲಪ್ಪ ಸನದಿ ರವರು ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರು ನನ್ನ ಸಂಬಂಧಿಕರಾಗಿರುವುದಿಲ್ಲ. ಸದರಿ ಸಾಕ್ಷಿದಾರರು ಗಜಪತಿ ಊರಿಗೆ ಸೇರಿದವರು. ನಿಪಿ-4 ಕ್ಕೆ ಸಾಕ್ಷಿದಾರರು ಬೆಳಗಾವಿಯಲ್ಲಿಯೇ ಸಹಿ ಮಾಡಿರುತ್ತಾರೆ.

2. ಸರ್ವೆ ನಂಬರ 56 ರಲ್ಲಿ ಇರುವ ಹಿಸ್ಸಾ ನಂಬರಗಳಲ್ಲಿ ಸರ್ವೆ ನಂಬರ 56/4 ನ್ನು ಹೊರತುಪಡಿಸಿ ಬೇರೆ ಹಿಸ್ಸಾ ನಂಬರಗಳಲ್ಲಿ ವಾಟ್ನಿ ಆಗಿರುತ್ತದೆಯೇ ಎಂದರೆ ಸಾಕ್ಷಿ ಆ ರೀತಿ ವಾಟ್ನಿ ಪತ್ರ ಮಾಡಿಕೊಳ್ಳಲಾಗಿತ್ತು, ಆದರೆ ಹಕ್ಕು ಬಿಟ್ಟುಕೊಟ್ಟ ಪತ್ರ ಮಾಡಿಕೊಳ್ಳಬೇಕು ಎಂಬ ಕಾರಣಕ್ಕೆ ಅದು ರದ್ದಾಗಿರುತ್ತದೆ. ಸದರಿ ವಾಟ್ನಿ ಆದ ಬಗ್ಗೆ ಬಾಂಡಗಳು ನನ್ನ ಬಳಿ ಇರುವುದಿಲ್ಲ, ಅವು ಯಾರು ಯಾರಿಗೆ ಸಂಬಂಧಪಟ್ಟಿದ್ದು ಅವರಿಗೆ ವಾಪಸ್ಸು ನೀಡಲಾಗಿತ್ತು ಅವುಗಳಲ್ಲಿ ಒಂದು ಮಾತ್ರ ನನ್ನ ಬಳಿ ಇರುತ್ತದೆ ಅದು ನಿಪಿ-4 ಆಗಿರುತ್ತದೆ. ಸರ್ವೆ ನಂಬರ 56 ರಲ್ಲಿ ಬೇರೆ ಹಿಸ್ಸಾ ನಂಬರಗಳಿಗೆ ಸಂಬಂಧಪಟ್ಟ ಬಾಂಡಗಳು ಪಕೀರಪ್ಪ ಬಸವಂತಪ್ಪ ಕರವಿನಕೊಪ್ಪ, ಪರಪ್ಪ ಈರಪ್ಪ ಕರವಿನಕೊಪ್ಪ ಹಾಗೂ ಬಸವರಾಜ ಬಸವಂತಪ್ಪ ಕರವಿನಕೊಪ್ಪ ರವರ ಬಳಿ ಇರುತ್ತದೆ. ನಿಪಿ-3 ರಲ್ಲಿ ಎಂದರೆ ಸರ್ವೆ ನಂಬರ 56/7 ರ ಪಹಣಿ ಪತ್ರದಲ್ಲಿ ನನ್ನ ಹೆಸರು ಏಕೆ ಕಡಿಮೆ ಆಗಿಲ್ಲ ಎಂದರೆ ಸಾಕ್ಷಿ ಸರ್ವೆ ಅಧಿಕಾರಿಗಳಿಗೆ ಆ ರೀತಿ ಹೆಸರು ಕಡಿಮೆ ಮಾಡಲು ಅಧಿಕಾರ ಇರುವುದಿಲ್ಲ ಎಂದು

ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ 56/7 ರ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಕಡಿಮೆ ಮಾಡಬೇಕೆಂದು ನಾನು ಸರ್ವೆ ಇಲಾಖೆಗೆ ಯಾವುದೇ ಅರ್ಜಿ ನೀಡಿರುವುದಿಲ್ಲ.

3. ನನ್ನ ಜಮೀನಿಗೆ ಪ್ರತಿವಾದಿ ತಕರಾರು ಮಾಡುತ್ತಿದ್ದರು ಎಂದು ನಾನು ವಾದಪತ್ರದಲ್ಲಿ ಬರೆದಿದ್ದು, ತಕರಾರು ಎಂದರೆ ಪ್ರತಿವಾದಿ ನನಗೆ ಪದೇ ಪದೇ ಬೈಯ್ಯುತ್ತಿದ್ದರು. ಪ್ರತಿವಾದಿ ನನಗೆ ಬೈಯ್ಯುತ್ತಿದ್ದರು ಎಂದು ನಾನು ಪೋಲಿಸ ಠಾಣೆಯಲ್ಲಿ ದೂರು ನೀಡಿರುವುದಿಲ್ಲ. ಸರ್ವೆ ನಂಬರ 56 ರಲ್ಲಿ ವಾಟ್ನಿ ಆಗುವ ಮೊದಲೇ ನನ್ನ ಹಾಗೂ ಪ್ರತಿವಾದಿಯ ನಡುವೆ ತಕರಾರುಗಳು ಇದ್ದವು ಎಂದರೆ ಸರಿಯಲ್ಲ. ನನ್ನ ಜಮೀನಾದ ಸರ್ವೆ ನಂಬರ 56/4 ಕ್ಕೆ ನಾನು ಹೋಗಬೇಕಾದರೆ ಬೇರೆಯವರ ಜಮೀನಿನ ಮೇಲೆ ಹೋಗಬೇಕಾಗುತ್ತದೆ. ಪ್ರತಿವಾದಿ ನನ್ನ ಹೊಲದ ಮುಖಾಂತರ ದಾಟಿ ಅವರ ಹೊಲಕ್ಕೆ ಹೋಗುತ್ತಾರೆ ಹಾಗೂ ನಾನು ಅವರ ಹೊಲದ ಮುಖಾಂತರ ದಾಟಿ ನನ್ನ ಹೊಲಕ್ಕೆ ಹೋಗುತ್ತೇನೆ. ಸರ್ವೆ ನಂಬರ 56/4 ಕ್ಕೆ ಹೋಗಬೇಕಾದರೆ ನಾನು ಪ್ರತಿವಾದಿಯ ಹೊಲದ ಮೇಲೆ ಹೋಗುವುದಿಲ್ಲ. ಪ್ರತಿವಾದಿಯು ನನ್ನ ಹೊಲ ದಾಟಿ ಅವರ ಹೊಲಕ್ಕೆ ಹೋಗುತ್ತಾರೆ. ಈಗ ನಾನು ನಿಪಿ-2 ನಕ್ಷೆಯನ್ನು ನೋಡುತ್ತಿದ್ದು, ಅದರಲ್ಲಿ ಸರ್ವೆ ನಂಬರ 56/4 ರಲ್ಲಿ ಯಾವುದೇ ರಸ್ತೆ ಕಾಣುತ್ತಿಲ್ಲ. ನಾನು ನನ್ನ ಹೊಸ ಮನೆಯನ್ನು ಸರ್ವೆ ನಂಬರ 56/1 ರಲ್ಲಿ ಕಟ್ಟಿರುತ್ತೇನೆ. ಸರ್ವೆ ನಂಬರ 56/1 ರ ಪಹಣಿ ಪತ್ರದಲ್ಲಿ ಪರಪ್ಪ ಈರಪ್ಪ ಕರವಿನಕೊಪ್ಪ , ಪಕೀರಪ್ಪ ಬಸವಂತಪ್ಪ ಕರವಿನಕೊಪ್ಪ, ಹಾಗೂ ಬಸವರಾಜ ಬಸವಂತಪ್ಪ ಕರವಿನಕೊಪ್ಪ ಹಾಗೂ ನನ್ನ ಹೆಸರು ನಮೂದು ಇರುತ್ತದೆ. ನಾನು ಕಟ್ಟಿರುವ ಹೊಸ ಮನೆ ಸರ್ವೆ ನಂಬರ 56/1 ರಲ್ಲಿ ಇದ್ದು, ನಾನು ಸದರಿ ಮನೆ ಕಟ್ಟುವಾಗ ಮೇಲೆ ಹೇಳಿದ ವ್ಯಕ್ತಿಗಳ ಒಪ್ಪಿಗೆ ಪತ್ರ ಪಡೆದಿರುವುದಿಲ್ಲ. ಸರ್ವೆ ನಂಬರ 56/1 ರಲ್ಲಿ ನಾನು ಕಟ್ಟಿರುವ ಮನೆಗೆ ಸಂಬಂಧಪಟ್ಟಂತೆ ಅದು ನನ್ನ ಪಾಲಿಗೆ ಬಂದ ಬಗ್ಗೆ ನಾನು ಬಾಂಡ್ ಹೊಂದಿರುತ್ತೇನೆ, ಅದನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಅದನ್ನು

ಹಾಜರುಪಡಿಸುತ್ತೇನೆ. ನಾನು ನನ್ನ ವಾದಪತ್ರದಲ್ಲಿ ನಾನು ಸರ್ವೆ ನಂಬರ 56 ರ ಎಲ್ಲಾ ಹಿಸ್ಸಾ ನಂಬರಗಳಲ್ಲಿ ವಾಟ್ನಿ ಮಾಡಿಕೊಡಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ. ಜಮೀನಿನ ಮೇಲೆ ಸಾಲ ಪಡೆಯಬೇಕಾದರೆ ಜಮೀನಿನ ಉತಾರದಲ್ಲಿ ಜಂಟಿಯಾಗಿ ಹೆಸರುಗಳು ನಮೂದಾಗಿದ್ದರೆ ಆಗ ನಾನು ಒಬ್ಬನೇ ಸಾಲ ಪಡೆಯಲು ಬೇರೆ ಜಂಟಿ ಮಾಲೀಕರ ಒಪ್ಪಿಗೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಿಪಿ-4 ಬಾಂಡನ ಸಾಕ್ಷಿದಾರರನ್ನು ನಾನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯ ನುಡಿಸಬಲ್ಲೆ.

5. ವಾದಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ತಿಳಿದಿರುತ್ತದೆ. ಪ್ರತಿವಾದಿಗೆ ವಯಸ್ಸಾಗಿರುವ ಕಾರಣ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ನಾನು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಸರ್ವೆ ನಂಂಬರ 56/4 ರ ಕುರಿತು ಮಾತ್ರ ನಮೂದು ಮಾಡಿದ್ದು ವಾದಪತ್ರದಲ್ಲಿ ಸರ್ವೆ ನಂಬರ 56 ರ ಕುರಿತು ವಾಟ್ನಿ ಆಗಿರುತ್ತದೆ ಅಥವಾ ಅದು ನಮ್ಮ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ 56/1 ರಲ್ಲಿ ನಾನು ಮನೆ ಕಟ್ಟಿರುವ ಜಾಗವು ಪ್ರತಿವಾದಿಗೆ ಸೇರಬೇಕು ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಸದರಿ ಜಾಗ ಬಿಟ್ಟುಕೊಡಬೇಕು ಎಂದು ವಿನಾಕಾರಣ ಅವರಿಗೆ ತೊಂದರೆ ಕೊಡುವ ಸಲುವಾಗಿ ನಾನು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಿರುವ ಜಾಗವು ನನ್ನ ಪಾಲಿಗೆ ಬರುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರಪಡಿಸಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**